ದಿನಾಂಕ 01-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರವಾಗಿ ಶ್ರೀ ಬಿಎನ್ ವಕೀಲರವರಿಂದಃ

ನೀವು ನ್ಯಾಯಾಲಯದ ಆದೇಶವು ಉಲ್ಲಂಘನೆಯಾಗಿದೆ ಎಂದು ಹೇಳಿರುತ್ತೀರಿ ಯಾವ ನ್ಯಾಯಾಲಯದ ಆದೇಶವು ಉಲ್ಲಂಘನೆಯಾಗಿದೆ ಎಂದರೆ ಮಾನ್ಯ ಕೆಳ ನ್ಯಾಯಾಲಯದ ಆದೇಶವು ಉಲ್ಲಂಘನೆಯಾಗಿರುತ್ತದೆ. ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಯನ್ನು ಹಾಗೂ ಪ್ರಮಾಣ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನಿಮ್ಮ ಗೌರವಾನ್ವಿತ ವಕೀಲರಿಗೆ ನೀವೇ ನೀಡಿರುತ್ತೀರಾ ಎಂದರೆ ಹೌದು. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಮಾನ್ಯ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಎಂದು ನಮೂದಿಸಿರುತ್ತೀರಿ ಅದು ಸರಿ ಇದೆಯೇ ಎಂದರೆ ಅದರ ಬಗ್ಗೆ ನನಗೆ ಅಷ್ಟು ತಿಳಿದಿರುವುದಿಲ್ಲ. ಯಾವ ದಿನಾಂಕದ ಆದೇಶವೆಂದು ಹೇಳಬಹುದೇ ಎಂದರೆ ದಿನಾಂಕ 16.01.2021 ರ ಆದೇಶ. ನೀವು ಅದೇ ನ್ಯಾಯಾಲಯದಲ್ಲಿ ಆದೇಶ ಉಲ್ಲಂಘನೆಯ ಅರ್ಜಿಯನ್ನು ಸಲ್ಲಿಸಿರುತ್ತೀರಾ ಎಂದರೆ ಹೌದು. ದಿನಾಂಕ 16.01.2021 ರ ಆದೇಶವಾದ ಎಷ್ಟು ದಿನದ ಒಳಗೆ ಕೆಳ ನ್ಯಾಯಾಲಯದಲ್ಲಿ ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗಿದೆ ಎಂದು ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ ದಿನಾಂಕ 16.02.2023 ರಂದು ಸಲ್ಲಿಸಿರುತ್ತೇನೆ. ನೀವು ಕೆಳ ನ್ಯಾಯಾಲಯದಲ್ಲಿ ಸಲ್ಲಿಸಿದ ಅರ್ಜಿಯು ಏನು ಆಗಿರುತ್ತದೆ ಎಂದರೆ ಈ ನ್ಯಾಯಾಲಯಕ್ಕೆ ವರ್ಗಾವಣೆಯಾಗಿರುತ್ತದೆ. ಕೆಳ ನ್ಯಾಯಾಲಯದ ಆದೇಶದ ಉಲ್ಲಂಘನೆಗಾಗಿ ಕೆಳ ನ್ಯಾಯಾಲಯದಲ್ಲಿಯೇ ಅರ್ಜಿಯನ್ನು ಸಲ್ಲಿಸಬೇಕು ಎನ್ನುವ ತಿಳುವಳಿಕೆ ನಿಮಗೆ ಇದೆ ಎಂದರೆ ಇರುವುದಿಲ್ಲ. ನೀವು ಕೆಳ ನ್ಯಾಯಾಲಯದಲ್ಲಿ ಪಡೆದುಕೊಂಡ ರೀತಿಯ ಆದೇಶವನ್ನು ಈ ನ್ಯಾಯಾಲಯದಿಂದ ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ. ಅಸಲು ದಾವೆಗಳು ಈ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದ ವಿಚಾರವು ನಿಮಗೆ ಗೊತ್ತಿದೆಯೇ ಎಂದರೆ ಹೌದು. ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಆದೇಶದ ಮೇರೆಗೆ ಅಸಲು ದಾವೆಗಳನ್ನು ಈ ನ್ಯಾಯಾಲಯಕ್ಕೆ ವರ್ಗಾವಣೆ

ಪಡೆದುಕೊಂಡಿರುವುದು ಎಂದರೆ ಹೌದು. ವರ್ಗಾವಣೆಯನ್ನು ಯಾರು ಪಡೆದುಕೊಂಡರು ಎಂದರೆ ಪ್ರತಿವಾದಿಯವರು ಪಡೆದುಕೊಂಡರು. ನಿಮ್ಮ ಹಾಗೂ ಪ್ರತಿವಾದಿಯವರ ನಡುವಿನ ವಿವಾದವು ಬಾಡಿಗೆದಾರ ಮತ್ತು ಮಾಲೀಕರ ನಡುವಿನ ಸಂಬಂಧವಾಗಿರುತ್ತದೆ ಎಂದರೆ ಹೌದು. ಪ್ರತಿವಾದಿಯವರು ದಿನಾಂಕ 24.11.2020 ರಂದು ಮೊದಲ ಬಾರಿ ನೋಟೀಸ್ ನೀಡಿದಾಗ ನಿಮ್ಮ ನಡುವೆ ವಿವಾದ ಉಂಟಾಗಿರುತ್ತದೆ ಎಂದರೆ ಹೌದು. ಪ್ರತಿವಾದಿಯವರು ನಿಮಗೆ ನೀಡಿದ ನೋಟೀಸ್ ಬಾಡಿಗೆ ಕಟ್ಟಡವನ್ನು ಬಿಡಬೇಕು ಹಾಗೂ ಬಾಡಿಗೆ ಹಣವನ್ನು ಪಾವತಿ ಮಾಡಬೇಕು ಎಂದರೆ ಕಟ್ಟಡವನ್ನು ಬಿಡಬೇಕು ಎಂದು ಎಂದರೆ ಬಾಡಿಗೆ ಕಟ್ಟಡವನ್ನು ಬಿಡಬೇಕು ಎಂದು ಮಾತ್ರ ಇತ್ತು ಬಾಡಿಗೆ ಹಣವನ್ನು ಕೊಡಬೇಕು ಎಂದು ಇರಲಿಲ್ಲ. ದಿನಾಂಕ 24.11.2020 ರವರೆಗೆ ನಿಮ್ಮ ಹಾಗೂ ಪ್ರತಿವಾದಿಯವರ ನಡುವೆ ವಿವಾದ ಇರಲಿಲ್ಲ ಎಂದರೆ ಹೌದು. ದಿನಾಂಕ 23.06.2019 ರಲ್ಲಿ ಕಟ್ಟಡವು ಬೆಂಕಿಯ ಆಹುತಿಗೆ ಒಳಗಾಗಿತ್ತು ಎಂದರೆ ಹೌದು. ಬ್ಯಾಂಕಿನವರು ಅವರಿಗೆ ಬರಬೇಕಿದ್ದ ಸಾಲಕ್ಕಾಗಿ ಕಟ್ಟಡದ ಸಂಪೂರ್ಣ ಭಾಗವನ್ನು ಸ್ವಾಧೀನಕ್ಕೆ ಪಡೆದುಕೊಂಡಿದ್ದಾರೆ ಎಂದರೆ ಹೌದು. ಆದರೆ ನಾನು ಬಾಡಿಗೆಗೆ ಪಡೆದಿರುವ ಭಾಗವನ್ನು ನಾಮಾಕಾವಸ್ಥೆಗೆ ಸ್ವಾಧೀನಕ್ಕೆ ಪಡೆದಿರುತ್ತಾರೆ. ಬಾಡಿಗೆಗೆ ಪಡೆದಿರುವ ಕಟ್ಟಡವನ್ನು ನೀವು ಇದುವರೆವಿಗೂ ಅನುಭವಿಸಿಕೊಂಡು ಬರುತ್ತಿದ್ದೀರಾ ಎಂದರೆ ಇಲ್ಲ. ಅದೇ ಕಟ್ಟಡದಲ್ಲಿ ನಿಮಗೆ ನೀಡಿರುವ ಮಳಿಗೆಯ ರೀತಿಯಲ್ಲಿಯೇ ಹಲವಾರು ಪ್ರತಿವಾದಿಯವರಿಗೆ ಸೇರಿದ ಮಳಿಗೆಗಳು ಇವೆ ಎಂದರೆ ಅದು ನನಗೆ ಗೊತ್ತಿಲ್ಲ. ಕಟ್ಟಡವು ಬೆಂಕಿ ಆಹುತಿಯಾದ ನಂತರ ಕಟ್ಟಡದಲ್ಲಿದ್ದ ಇತರ ಕೋಣೆಗಳ ಬಾಡಿಗೆದಾರರು ತಮ್ಮ ಸ್ವಂತ ಇಚ್ಛೆಯಿಂದ ಖಾಲಿ ಮಾಡಿ ಬಿಟ್ಟು ಕೊಟ್ಟಿರುತ್ತಾರೆ ಈ ವಿಚಾರ ನಿಮಗೆ ತಿಳಿದಿದ್ದರೂ ಸಹ ಸುಳ್ಳು ಹೇಳುತ್ತಿದ್ದೀರಿ ಎಂದರೆ ಇಲ್ಲ. ನೀವು ಯಾವ ಕಾರಣದಿಂದ ಪ್ರತಿವಾದಿಯವರ ವಿರುದ್ಧ ನ್ಯಾಯಾಲಯದ ಆದೇಶದ ಉಲ್ಲಂಘನೆಗಾಗಿ ಅರ್ಜಿಯನ್ನು ಸಲ್ಲಿಸಿರುವುದು ಎಂದರೆ ನ್ಯಾಯಾಲಯವು ನೀರು ಹಾಗೂ ವಿದ್ಯುತ್ ಸೌಲಭ್ಯವನ್ನು ಪುನಃ ಒದಗಿಸಬೇಕೆಂದು ಆದೇಶವನ್ನು ಮಾಡಿದ್ದು, ಆದರೂ ಸಹ ಪ್ರತಿವಾದಿಯವರು ಉದ್ದೇಶ ಪೂರ್ವಕವಾಗಿ ನೀರಿನ ಸವಲತ್ತನ್ನು ಕಡಿತಗೊಳಿಸಿರುತ್ತಾರೆ. ನೀರು ಸಂಪಿನಿಂದ ಮಹಡಿಯ ಮೇಲಿರುವ ಟ್ಯಾಂಕ್ ಗೆ ಸರಬರಾಜು ಆಗುವುದೇ ಎಂದರೆ ಹೌದು. ಮಹಡಿಯ ಮೇಲಿರುವ

ಟ್ಯಾಂಕ್ ಎಷ್ಟು ಲೀಟರ್ ಸಾಮರ್ಥ್ಯದ್ದು ಎಂದು ನಿಮಗೆ ತಿಳಿದಿದೆಯೇ ಎಂದರೆ ಇಲ್ಲ. ಮಹಡಿಯ ಮೇಲಿರುವ ಟ್ಯಾಂಕ್ ನಿಂದ ಆ ಕಟ್ಟಡದಲ್ಲಿರುವ ಎಲ್ಲಾ ಕೋಣೆಗಳಿಗೂ ಸರಬರಾಜು ಆಗುವುದು ಎಂದರೆ ಗೊತ್ತಿಲ್ಲ. ನೀವು ಮಹಡಿಯ ಮೇಲಿರುವ ಟ್ಯಾಂಕ್ ನ್ನು ಪರಿಶೀಲನೆ ಮಾಡಿರುತ್ತೀರಾ ಎಂದರೆ ಇಲ್ಲ. ಕಟ್ಟಡದ ಸಂಪು ಎಲ್ಲಿ ಇರುತ್ತದೆ ಮತ್ತು ಅದನ್ನು ನೀವು ನೋಡಿರುತ್ತೀರಾ ಎಂದರೆ ಅದು ಎಲ್ಲಿ ಇದೆ ಎಂದು ಗೊತ್ತಿಲ್ಲ ಹಾಗೂ ನೋಡಿರುವುದೂ ಇಲ್ಲ. ಸಂಪಿನಿಂದ ಮಹಡಿಯ ಮೇಲಿರುವ ಟ್ಯಾಂಕ್ ಗೆ ನೀರು ಅಟೋಮೆಟಿಕ್ ಸ್ವಿಚ್ ನ ಆಧಾರದ ಮೇಲೆ ಸರಬರಾಜು ಆಗುವುದು ಮನುಷ್ಯ ನ ಕೈಯಿಂದ ಅದನ್ನು ನಡೆಸುವುದಿಲ್ಲ ಎಂದರೆ ಅಟೋಮೆಟಿಕ್ ಸ್ವಿಚ್ ಇರುತ್ತದೆ, ಅದು ಕೆಟ್ಟು ಹೋಗಿರುತ್ತದೆ, ರಿಪೇರಿ ಮಾಡಿಸಿರುವುದಿಲ್ಲ. ಸಂಪಿನಿಂದ ಮಹಡಿಯ ಟ್ಯಾಂಕ್ ಗೆ ನೀರು ಸರಬರಾಜು ಮಾಡಲು ಅಳವಡಿಸಿಸಿರುವ ಅಟೋಮೆಟಿಕ್ ಸ್ವಿಚ್ ನಿಮಗೆ ಬಾಡಿಗೆಯನ್ನು ನೀಡಿರುವ ಮಳಿಗೆಯ ಪಕ್ಕದಲ್ಲಿಯೇ ಇದೆ ಎಂದರೆ ಇಲ್ಲ. ಹಾಗಾದರೆ ಅದು ಎಲ್ಲಿ ಇರುತ್ತದೆ ಎಂದರೆ 1 ನೇ ಮಹಡಿಯ ಮೆಟ್ಟಿಲುಗಳ ಬಳಿ ಇರುತ್ತದೆ. ಕಟ್ಟಡದಲ್ಲಿರುವ ಮಳಿಗೆಗಳ ಮಾಲೀಕರ ಸಂಘ ಇದೆಯೇ ಎಂದರೆ ಇಲ್ಲ. ಕೆಟ್ಟು ಹೋಗಿರುವ ಅಟೋಮೆಟಿಕ್ ಸ್ವಿಚ್ ನ್ನು ದುರಸ್ಥಿ ಮಾಡಬೇಕೆಂದು ಕೇಳುತ್ತಿದ್ದೀರಾ ಎಂದರೆ ಇಲ್ಲ. ಯಾವ ಕಾರಣದಿಂದ ಅಟೋಮೆಟಿಕ್ ಸ್ವಿಚ್ ಕೆಟು ಹೋಗಿರುತ್ತದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ಅಟೋಮೆಟಿಕ್ ಸ್ವಿಚ್ ಕೆಟ್ಟು ಹೋಗಿರುತ್ತದೆ ಅದನ್ನು ಸರಿ ಮಾಡಿಕೊಡಿ ಎಂದು ಪ್ರತಿವಾದಿಯವರಿಗೆ ಲಿಖಿತ ರೂಪದಲ್ಲಿ ಕೊಟ್ಟಿದ್ದೀರಾ ಎಂದರೆ ಇಲ್ಲ. ಕಟ್ಟಡಕ್ಕೆ ಬೆಂಕಿ ಬೀಳುವ ಮೊದಲು ಸಹ ಆ ಸಮಸ್ಯೆ ಇತ್ತೇ ಎಂದರೆ ಹೌದು. ಆ ಸಮಯದಲ್ಲಿ ಅದನ್ನು ಯಾರು ರಿಪೇರಿ ಮಾಡಿಸುತ್ತಿದ್ದರು ಎಂದರೆ ರಿಪೇರಿಯೇ ಮಾಡಿಸಿರುವುದಿಲ್ಲ. ಪ್ರತಿವಾದಿಯವರಿಂದ ಕಟ್ಟಡದ ಸ್ವಾಧೀನವನ್ನು ಬ್ಯಾಂಕಿನವರು ಪಡೆದುಕೊಂಡಿದ್ದಾರೆಂದರೆ ಹೌದು. ಸ್ವಿಚ್ ನ ಸಮಸ್ಯೆಯ ಬಗ್ಗೆ ನೀವಲ್ಲದೆ ಅಲ್ಲಿ ಬಾಡಿಗೆಯನ್ನು ಪಡೆದಿರುವವರು ಯಾರಾದರೂ ಹೇಳಿರುತ್ತಾರೆಯೇ ಎಂದರೆ ಎಲ್ಲರೂ ಹೇಳಿದ್ದಾರೆ. ಸಂಪಿನಲ್ಲಿ ಅಳವಡಿಸಿರುವ ಮೋಟಾರ್ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿ ಇದೆಯೇ ಎಂದರೆ ನಾನು ಸಂಪನ್ನು ನೋಡಿರುವುದಿಲ್ಲ ಹಾಗಾಗಿ ಮೋಟಾರಿನ ಬಗ್ಗೆ ತಿಳಿದಿರುವುದಿಲ್ಲ.

ಪ್ರತಿವಾದಿಯವರು ಆ ಕಟ್ಟಡದಲ್ಲಿ ವಾಸವಾಗಿರುವುದಿಲ್ಲ, ಸ್ವಲ್ಪ ದೂರದಲ್ಲಿ ವಾಸವಾಗಿರುವುದು ಎಂದರೆ ಗೊತ್ತಿಲ್ಲ. ಪ್ರತಿವಾದಿಯವರು ಬಾಡಿಗೆ ತನವನ್ನು ಬಿಟ್ಟು ಕೊಡುವಂತೆ ಕೇಳಿದ ಕಾರಣ ಅವರ ಮೇಲೆ ಸಿಟ್ಟುಗೊಂಡು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ಇಲ್ಲ. ಬೆಂಕಿ ಬಿದ್ದ ಲಗಾಯ್ತು ನೀರು ಎತ್ತುವ ಮೋಟಾರ್, ಸ್ವಿಚ್ ಎಲ್ಲವೂ ನಿರ್ವಹಣೆಯಾಗುತ್ತಾ ಬರುತ್ತಿದೆಯೇ ಎಂದರೆ ಗೊತ್ತಿಲ್ಲ. ಕೆಳ ನ್ಯಾಯಾಲಯದಲ್ಲಿ ಪ್ರತಿವಾದಿಯವರ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿ ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ಇಲ್ಲ. ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗಿದೆ ಎಂದು ಹೇಳುವುದು ನೀರಿನ ವಿಚಾರಕ್ಕಾಗಿ ಮಾತ್ರ, ವಿದ್ಯುಚ್ಛಕ್ತಿಯ ವಿಚಾರಕ್ಕಾಗಿ ಅಲ್ಲ ಎಂದರೆ ಹೌದು. ಪ್ರತಿವಾದಿಯವರೇ ನೀರಿನ ಸರಬರಾಜನ್ನು ತಡೆ ಹಿಡಿದಿರುತ್ತಾರೆಂದು ತೋರಿಸಲು ನಿಮ್ಮ ಬಳಿ ದಾಖಲೆ ಇದೆಯೇ ಎಂದೆರ ಅವರೇ ಹೇಳಿರುತ್ತಾರೆ. ಪ್ರತಿವಾದಿಯವರು ಬಾಡಿಗೆ ತನವನ್ನು ಬಿಟ್ಟು ಕೊಡಬೇಕೆಂದು ಹಾಗೂ ಬಾಡಿಗೆ ಹಣವನ್ನು ಕೊಡಬೇಕೆಂದು ಕೇಳಿದ್ದರಿಂದ ನೀವು ಸುಳ್ಳು ಅರ್ಜಿಯನ್ನು ಅವರ ವಿರುದ್ಧ ಸಲ್ಲಿಸಿರುತ್ತೀರಿ ಎಂದರೆ ಇಲ್ಲ. ಪ್ರತಿವಾದಿಯವರು ಸಮಾಜದಲ್ಲಿ ಪ್ರತಿಷ್ಟಿತ ವ್ಯಕ್ತಿಯಾಗಿದ್ದು, ಕಾನೂನಿಗೆ ಗೌರವ ಕೊಡುವ ವ್ಯಕ್ತಿಯಾಗಿರುತ್ತಾರೆಂದರೆ ಸುಳ್ಳು. ನೀವು ಹೇಳುವ ರೀತಿಯಲ್ಲಿ ಪ್ರತಿವಾದಿಯವರು ನ್ಯಾಯಾಲಯದ ಯಾವುದೇ ಆದೇಶವನ್ನು ಉಲ್ಲಂಘನೆ ಮಾಡಿರುವುದಿಲ್ಲ ಹಾಗೂ ಉಲ್ಲಂಘನೆ ಮಾಡುವ ಉದ್ದೇಶವೂ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ನಿಮ್ಮ ವಿರುದ್ಧ ದಾವೆಯನ್ನು ಸಲ್ಲಿಸಿ ಕಾನೂನುಬದ್ಧವಾಗಿ ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆಂದರೆ ಇಲ್ಲ. ನಿಮ್ಮ ವಿರುದ್ಧ ದಾವೆಯನ್ನು ಸಲ್ಲಿಸಿರುವುದು ಕಾನೂನುಬದ್ಧವೇ ಎಂದರೆ ಹೌದು, ಆದರೆ ಅವರು ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಂಡಿರುವುದಿಲ್ಲ. ಪ್ರತಿವಾದಿಯವರು ಕಾನೂನುಬದ್ಧವಾಗಿ ನಿಮಗೆ ನೋಟೀಸ್ ನೀಡಿ ದಾವೆಯನ್ನು ಸಲ್ಲಿಸಿರುತ್ತಾರೆ, ನೀವು ಅವರ ವಿರುದ್ಧ ಸುಳ್ಳು ದಾವೆಯನ್ನು ಹಾಗೂ ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸುಳ್ಳು. ನೀವು ಎಲ್ಲಾ ಸವಲತ್ತುಗಳೊಂದಿಗೆ ಅಂಗಡಿ ಕೋಣೆಯನ್ನು ಅನುಭವಿಸಿಕೊಂಡು ಬರುತ್ತಾ ಇರುತ್ತೀರಿ ಎಂದರೆ ಇಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.